ಎತ್ತಿ ಹಿಡಿಯುವ ಜವಾಬ್ದಾರಿಯುತ ಪಾಠವನ್ನು ಯುದ್ಧ ನನಗೆ ಕಲಿಸಿದೆ. ಯುದ್ಧವನ್ನು ನಾವು ಕೇವಲ ವಿಯೆಟ್ನಾಮಿನ ಕಷ್ಟನಷ್ಟಗಳಿಗೆ ಸೀಮಿತಗೊಳಿಸಿ ಮಾತನಾಡಬಾರದು, ಬದಲಿಗೆ ಮನುಷ್ಯನ ಅಸ್ತಿತ್ವದ ಪ್ರಶ್ನೆ, ಸಹಾನುಭೂತಿ ಮತ್ತು ಸೃಜನಶೀಲತೆಯಿಂದಲೂ ವ್ಯಾಖ್ಯಾನಿಸುವುದು ಬಹಳ ಮುಖ್ಯ. ಸಾಹಿತ್ಯವು ಈ ಪಾಠಗಳನ್ನು ನಿಧಾನವಾಗಿ ಮುಂದಿನ ತಲೆಮಾರಿಗೆ ದಾಟಿಸುತ್ತದೆ. ಸಾಮೂಹಿಕ ಗಾಯಗಳನ್ನು ಯಾವ ಕಹಿಯಿಲ್ಲದೆ ನೆನಪಿಸಿಕೊಳ್ಳುವುದರ ಜೊತೆಗೆ ಅಷ್ಟು ಸುಲಭವಾಗಿ ಮರೆಯದೇ ಬದುಕಿನಲ್ಲಿ ಭರವಸೆ ಇಟ್ಟುಕೊಂಡು ಮುಂದುವರಿಯಲು ನೆರವಾಗುತ್ತದೆ.

**◆ ಆಧುನಿಕ ವಿಯೆಟ್ನಾಂ ಕಟ್ಟುವಲ್ಲಿ ಹೋ ಚಿ ಮಿನ್ಹ್ ಅವರ ಸಂಘಟಿತ ಹೋರಾಟ ಮತ್ತು ತ್ಯಾಗದ ಮಹತ್ವವನ್ನು ಒಬ್ಬ ಮಹಿಳೆಯಾಗಿ ನೀವು ಹೇಗೆ ನೆನಪಿಸಿಕೊಳ್ಳಲು ಬಯಸುತ್ತೀರಿ?**

ಹೋ ಚಿ ಮಿನ್ಹ್ ಅವರ ಸಾಮೂಹಿಕ ಹೋರಾಟ ಮತ್ತು ತ್ಯಾಗದ ಬದುಕು ವಿಯೆಟ್ನಾಮಿನ ಉಳಿವಿಗೆ ಬಹಳ ಮುಖ್ಯವಾಗಿತ್ತು. ಆದರೂ ಒಬ್ಬ ಮಹಿಳಾ ಕವಿಯಾಗಿ ಚರಿತ್ರೆಯು ನಮ್ಮ ವೈಯಕ್ತಿಕ ಭಾವನೆಗಳೊಂದಿಗೆ ಹೇಗೆ ಬೆಸೆದುಕೊಂಡಿದೆ ಎಂಬುದರ ಬಗ್ಗೆ ನಾನು ಆಲೋಚಿಸುತ್ತೇನೆ. ಪ್ರತಿ ಗೆಲುವು ಅಥವಾ ಸೋಲಿನ ಹಿಂದೆ ಅವ್ಯಕ್ತ ದುಃಖವನ್ನು ಹೊತ್ತಿರುವ ತಾಯಂದಿರು, ಹೆಂಡತಿಯರು ಮತ್ತು ಹೆಣ್ಣುಮಕ್ಕಳು ಇದ್ದರು. ನನ್ನ ಬರಹಗಳು ಈ ಮರೆಯಾಗಿರುವ ಭಾವನೆಗಳ ಭೂದೃಶ್ಯಗಳಿಗೆ ನುಡಿ ನಮನ ಸಲ್ಲಿಸಲು ಪ್ರಯತ್ನಿಸುತ್ತವೆ. ನನಗೆ ದೇಶಭಕ್ತಿ ಮತ್ತು ಖಾಸಗಿ ಸೆಂಟಿಮೆಂಟುಗಳು ವಿರುದ್ಧವಾದವುಗಳಲ್ಲ, ಅವು ಒಂದು ಸಂವಾದವನ್ನು ರೂಪಿಸುತ್ತವೆ ಅನಿಸಿದೆ. ಹೆಣ್ಣುಮಕ್ಕಳ ಧ್ವನಿ, ಹೋರಾಟ ಮತ್ತು ಪುಟಿದೇಳುವ ಚೈತನ್ಯದ ಕಥೆಗೆ ಅಪಾರ ಜೀವಂತಿಕೆ ಮತ್ತು ಬದುಕಿನ ಆಳವನ್ನು ಸೇರಿಸುತ್ತವೆ. ಚರಿತ್ರೆಯು ಹರಿಯುವ ನದಿಯಂತೆ, ಭೂತಕಾಲದಿಂದ ವರ್ತಮಾನಕ್ಕೆ ಚಲಿಸುತ್ತದೆ, ಕೆಲವೊಮ್ಮೆ ವರ್ತಮಾನದಿಂದ ಭೂತಕ್ಕೂ ಚಲಿಸುತ್ತದೆ. ಜನ ಕೆಲವರು ಸರಳವಾಗಿ, ಇನ್ನೂ ಕೆಲವರು ಕಷ್ಟಪಟ್ಟು ಹೊಂದಿಕೊಳ್ಳುತ್ತಾರೆ. ಆದರೆ ಇದೆಲ್ಲದರ ಜೊತೆಗೆ, ನನ್ನ ದೇಶದ ಅಣು ಅಣುವನ್ನೂ, ಅದರ ನೋವು ನಲಿವು, ಅದರ ಸಂಘರ್ಷ, ಅದರ ಚಾಣಾಕ್ಷತನ, ಅದರ ಲವಲವಿಕೆಯನ್ನು ನಾನು ಪ್ರೀತಿಸುತ್ತೇನೆ.

**◆ ಪದೇ ಪದೇ ನಿಮಗೆ ಬೀಳುವ ಕನಸು ಯಾವುದಾದರೂ ಇದ್ದರೆ ಹಂಚಿಕೊಳ್ಳಿ...**

ನನಗೆ ಆಗಾಗ ನದಿ ಮತ್ತು ದೋಣಿಯ ಕನಸು ಬೀಳುತ್ತದೆ. ಒಂದೊಂದು ಸಲ ಒಂದೊಂದು ನದಿ. ದೋಣಿಯು ಕೆಲವೊಮ್ಮೆ ಶಾಂತವಾಗಿ ಸಾಗುತ್ತದೆ, ಕೆಲವೊಮ್ಮೆ ಹೆದ್ದೆರೆಗಳ ವಿರುದ್ಧ. ಇದು ಯಾವಾಗಲೂ ಎರಡು ಲೋಕಗಳ ಪರಸ್ಪರ ವಿರುದ್ಧ ದಿಕ್ಕಿನ ಪ್ರಯಾಣ. ಎಂದಿಗೂ ಒಂದನ್ನು ಪೂರ್ಣವಾಗಿ ಬಿಟ್ಟು ಹೋಗದ ಒಬ್ಬ ವಲಸಿಗಳಾಗಿ ಈ ಕನಸು ನನ್ನ ಜೀವನವನ್ನ ಪ್ರತಿಬಿಂಬಿಸುತ್ತದೆ ಎಂದು ಬಲವಾಗಿ ನಂಬುತ್ತೇನೆ. ನನ್ನ ಕನಸಿನಲ್ಲಿ ಬರುವ ನದಿಯೆಂದರೆ, ನೆನಪು ಮತ್ತು ಭವಿಷ್ಯ ಎರಡರ ಸಂಕೇತವೇ ಆಗಿದೆ. ದೂರದಲ್ಲಿ ತಾಳೆಮರಗಳ ತೋಪು ಕಾಣಿಸಿಕೊಳ್ಳುತ್ತದೆ. ಅದು ನನ್ನನ್ನು ವಿಯೆಟ್ನಾಮಿಗೆ ಹಿಂತಿರುಗಿ ಕರೆದೊಯ್ಯುತ್ತಲೇ ಅಜ್ಞಾತದ ಕಡೆಗೆ ಮುಂದಕ್ಕೂ ಕೊಂಡೊಯ್ಯುತ್ತಿದೆ.

**◆ ನಿಮಗೆ ಭಯ ಹುಟ್ಟಿಸುವ ಸಂಗತಿ ಯಾವುದು? ಅಂತಹದ್ದೇನಾದರೂ ಇದ್ದರೆ ಹಂಚಿಕೊಳ್ಳಿ.**

‘ವಿಸ್ಮೃತಿ’ ನನ್ನ ಆತಂಕ. ಅದು ತಾಯ್ನುಡಿ ಆಗಿರಲಿ, ಪರಂಪರೆಯ ವಿಸ್ಮೃತಿಯಾಗಿರಲಿ ಅಥವಾ ದೇಶಭಾಷೆಯ ವಿಸ್ಮೃತಿಯಾಗಿರಲಿ ಅದು ನನ್ನನ್ನು ಸದಾ ಆತಂಕಕ್ಕೆ ದೂಡುವ ವಿಚಾರ. ಅಂದರೆ ಭಾಷೆ ಮತ್ತು ಸಾಂಸ್ಕೃತಿಕ ಸ್ಮರಣೆಯನ್ನು ಕಳೆದುಕೊಳ್ಳುವ ಸಾಧ್ಯತೆ ನನ್ನನ್ನು ಹೆಚ್ಚು ಭಯಪಡಿಸುತ್ತದೆ. ಪದಗಳ ಸೇತುವೆ ಮುರಿದು ಹೋದಾಗ, ವಲಸಿಗ ಯುವ ಪೀಳಿಗೆಗಳು ವಿಯೆಟ್ನಾಮಿ ನುಡಿಗೆ ಅಪರಿಚಿತರಾಗುವ ದಿನವನ್ನು ನೆನೆದು ನಾನು ಹೆದರುತ್ತೇನೆ. ನನ್ನ ಮತ್ತೊಂದು ಭಯ ಆತಂಕವೆಂದರೆ ಆರೋಗ್ಯದ ಕುರಿತು. ಅದಕ್ಕಾಗಿಯೇ ಪ್ರತಿದಿನವನ್ನೂ ಸೆಲೆಬ್ರೇಟ್ ಮಾಡುವುದು, ನಮ್ಮ ಬಗ್ಗೆ ಕಾಳಜಿ ವಹಿಸುವುದು ಮುಖ್ಯವೆನಿಸುತ್ತದೆ. ●